# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ಹೊಂಬೇಗೌಡ ನಗರ ವಾರ್ಡ್ – 145 ರಲ್ಲಿ ವಾರ್ಡ್ ಸಮಿತಿ ಸಭೆಯನ್ನು ಶ್ರೀಮತಿ.ಲಕ್ಷ್ಮೀದೇವಿ ಉಪ ಆಯುಕ್ತರು ಕಂದಾಯ(ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪಣ್ಣೆ ಮೇರೆಗೆ ದಿನಾಂಕ: 03.04.2021 ರಂದು ಶನಿವಾರ ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ದಕ್ಷಿಣ ವಲಯದ ಉಪ ಆಯುಕ್ತರು (ದಕ್ಷಿಣ)ರವರ ಕಛೇರಿಯಲ್ಲಿ ಕರೆಯಲಾಗಿದ್ದು ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿ ಸದಸ್ಯರಿಗೆ ಆಹ್ವಾನ ನೀಡಿದ್ದು ಸಭೆಗೆ ಹಾಜರಾಗಿರುವ ಸದಸ್ಯರಿಗೆ ಸ್ವಾಗತ ಕೋರುತ್ತಾ ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀಮತಿ.ಲಕ್ಷ್ಮೀದೇವಿ ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

| ಹಾಜರಿದ್ದವರು | ಗೈರು ಹಾಜರಾತಿ |
|---|---|
| 1) ಉಪ ಆಯುಕ್ತರು (ದಕ್ಷಿಣ) ವಾರ್ಡ್–145 ನೋಡಲ್ ಅಧಿಕಾರಿ.<br>2) ವಾರ್ಡ್ 145 ಕ್ಕೆ ಸಂಬಂಧಪಟ್ಟಂತ AE, SHI, Electrical, Traffic Department, JHI & TI.<br>4) ವಿಲ್ಸನ್ ಗಾರ್ಡನ್ ವೆಲ್‌ಫೇರ್ ಅಸೋಸಿಯೇಷನ್ ಮತ್ತು ಶುಚಿ ಮಿತ್ರ ಸಂಘದವರು.<br>5) ಅಭಯಾಶ್ರಮದ ಸದಸ್ಯರು. | 1. Forest, BWSSB, Horticulture, Ward-145 Marshalls, BESCOM & Police Department, Garbage Contractor. |

**=**=**

- 10 ನೇ ಅಡ್ಡರಸ್ತೆ ಬಿ.ಟಿ.ಎಸ್ ರಸ್ತೆಯಲ್ಲಿ ವಿದ್ಯುತ್ ದೀಪಗಳು ಸರಿಯಾಗಿ ಕಾರ್ಯ ನಿರ್ವಹಣೆ ಇಲ್ಲದಿರುವುದರಿಂದ ಕೂಡಲೇ ಸಂಬಂಧಪಟ್ಟ ಸಿಬ್ಬಂಧಿಯವರು ಕ್ರಮವಹಿಸಲು ಸೂಚಿಸಲಾಯಿತ್ತು.
- 10 ನೇ ಅಡ್ಡ ರಸ್ತೆ ವಿಲ್ಸನ್ ಗಾರ್ಡನ್ ರಸ್ತೆಗಳಿಗೆ ತ್ಯಾಜ್ಯ ಸಂಗ್ರಹಿಸುವ ಆಟೋ ಟಿಪ್ಪರ್‌ಗಳು ತ್ಯಾಜ್ಯ ಸಂಗ್ರಹಣೆಗೆ ಬರುತ್ತಿಲ್ಲವೆಂದು ವೆಲ್‌ಪೇರ್ ಅಸೋಸಿಯೆಷನ್‌ರವರು ತಿಳಿಸಿರುತ್ತಾರೆ. ಆದ್ದರಿಂದ ಸಂಬಂಧಪಟ್ಟ ಸಿಬ್ಬಂಧಿಯವರು ಕ್ರಮವಹಿಸಲು ಸೂಚಿಸಲಾಯಿತು.
- 8 ನೇ ಅಡ್ಡ ರಸ್ತೆಯಲ್ಲಿ ಮರದ ರೆಂಬೆ/ಕೊಂಬೆಗಳು ರಸ್ತೆಗೆ ಬಾಗುತ್ತಿರುವುದರಿಂದ ಸಾರ್ವಜನಿಕರಿಗೆ, ಸಂಚಾರಸ್ಥರಿಗೆ ತೊಂದರೆಯಾಗುತ್ತಿರುವುದರಿಂದ ಕೂಡಲೇ ಸಂಬಂಧಪಟ್ಟ ಸಿಬ್ಬಂಧಿಯವರು ಕ್ರಮವಹಿಸುವಂತೆ ಸೂಚಿಸಲಾಯಿತು.

ಮು.ತಿ.ನೋ

Scanned with CamScanner

- ಸುಧಾಮನಗರ ವ್ಯಾಪ್ತಿಯಲ್ಲಿರುವಂತ ಅಭಾಯಾಶ್ರಮದಲ್ಲಿ BWSSB ಇಲಾಖೆಗೆ ಸಂಬಂಧಪಟ್ಟಂತ ಹೆಚ್ಚು ಸಮಸ್ಯೆ ಇರುವುದನ್ನು ಸದಸ್ಯರು ಸಭೆಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟಂತ ಇಲಾಖೆಯವರು ಕೂಡಲೇ ಕ್ರಮವಹಿಸುವಂತೆ ಸೂಚಿಸಲಾಯಿತು.

| | |
|---|---|
| ಕಾರ್ಯದರ್ಶಿ ಹಾಗೂ<br>ಸಹಾಯಕ ಅಭಿಯಂತರರು<br>ವಾರ್ಡ್ ಸಂಖ್ಯೆ – 145<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಅಧ್ಯಕ್ಷರು ಹಾಗೂ<br>ನೋಡಲ್ ಅಧಿಕಾರಿ<br>ವಾರ್ಡ್ ಸಂಖ್ಯೆ – 145<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

ಪ್ರತಿಯನ್ನು:–

1) ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ಮಾನ್ಯ ವಲಯ ಆಯುಕ್ತರುರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
4) ಮಾನ್ಯ ಜಂಟಿ ಆಯುಕ್ತರು (ದಕ್ಷಿಣ)ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
5) ತಂಡದ ಎಲ್ಲಾ ಸಿಬ್ಬಂಧಿರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
6) ಕಛೇರಿ ಕಡತಕ್ಕೆ.

Scanned with CamScanner